**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 62K– ತೃತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** **ಸಮಯ : 03.00 ಗಂಟೆಗಳು**

*******************************************************************************

## ಅಭ್ಯಾಸ ಪತ್ರಿಕೆ–1

*******************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8 x 1=8**

1. 'ಆಡಂಬರ' ಈ ಪದದ ವಿರುದ್ಧಾರ್ಥಕ ಪದ
   ಎ) ನಿರಾಡಂಬರ ಬಿ) ಅಂಬರ
   ಸಿ) ವಿಡಂಬರ ಡಿ) ಡಂಬರ
2. 'ಪೂರ್ವೋತ್ತರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಸವರ್ಣದೀರ್ಘ ಬಿ) ಯಣ್
   ಸಿ) ಗುಣ ಡಿ) ಜಶ್ತ್ವ
3. ಕೆಳಗಿನವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದ
   ಎ) ಸರಸರ ಬಿ) ಮನೆಮಠ
   ಸಿ) ಝುಳಝುಳ ಡಿ) ಧಗಧಗ
4. "ಪೊಲೀಸಿನವರ ಸಹವಾಸವಾದ ಮೇಲೆ ಲಾಕಪ್ ಆಗಲೇ ಬೇಕಷ್ಟೇ" ಈ ವಾಕ್ಯದಲ್ಲಿ ಬಳಸಿರುವ ಲೇಖನಚಿಹ್ನೆ
   ಎ) ಅಲ್ಪವಿರಾಮ ಬಿ) ವಾಕ್ಯವೇಷ್ಟನ
   ಸಿ) ಅರ್ಧವಿರಾಮ ಡಿ) ಉದ್ಧರಣ
5. ಕೆಳಗಿನವುಗಳಲ್ಲಿ ದಿಗ್ವಾಚಕಕ್ಕೆ ಉದಾಹರಣೆಯಾಗಿರುವ ಪದ
   ಎ) ಆಟ ಬಿ) ನೋಟ
   ಸಿ) ಮೂಡಣ ಡಿ) ಕೆಂಪು
6. ಕೆಳಗಿನವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾಗಿರುವ ಪದ
   ಎ) ವ್ಯವಸಾಯ ಬಿ) ಬೊಮ್ಮ
   ಸಿ) ಬಿಜ್ಜೆ ಡಿ) ಸಗ್ಗ
7. ಕೆಳಗಿನವುಗಳಲ್ಲಿ ಅನ್ಯದೇಶೀಯವಲ್ಲದ ಪದ
   ಎ) ಹೋಟೆಲ್ ಬಿ) ಟಿಕೆಟ್
   ಸಿ) ಪೊಲೀಸ್ ಡಿ) ಮನೆ
8. ಕೆಳಗಿನವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರದ ಪದ
   ಎ) ಅಮ್ಮ ಬಿ) ಅಕ್ಕ
   ಸಿ) ಪುಸ್ತಕ ಡಿ) ಅಪ್ಪ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4x1=4**

9. ಶರೀಫರು : ಶಿಶುನಾಳ :: ಗೋವಿಂದಭಟ್ಟರು : ----------
10. ಕುಲಕರ್ಣಿ : ಪಿಸ್ತೂಲ್ :: ರಾಮ್‌ಸಿಂಗ್: -------------
11. ಅಕ್ಕಿ : ಬಿಳಿದು :: ರಾಗಿ : ----------------------
12. ಅನಾಚಾರವೇ : ನರಕ :: ಆಚಾರವೇ : ------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4x1=4**

13. ಬೆಳವಡಿಯ ಸರದಾರ ಶಾಂತಯ್ಯ ಶಿವಾಜಿಯ ಬಳಿಗೆ ಯಾವ ವೇಷದಲ್ಲಿ ಹೋದನು?
14. ಜನಪದರು ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ಎಂದು ಹೇಳಿದ್ದಾರೆ?
15. 'ಹೀಗೊಂದು ಟಾಪ್ ಪ್ರಯಾಣ' ಲೇಖನವು ಯಾವ ಸಾಹಿತ್ಯ ಪ್ರಕಾರಕ್ಕೆ ಉದಾಹರಣೆಯಾಗಿದೆ?
16. ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಿದವರು ಯಾರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8x2=16**

17. ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು?
18. ಶರೀಫರ ಬಾಲ್ಯ ಹಿಂದೂ ಪರಂಪರೆಯೊಂದಿಗೆ ಬೆರೆತುಹೋದ ಬಗೆ ಹೇಗೆ?
19. ಗುರುಪಂಥ ಮತ್ತು ಅದರ ಮಹತ್ವವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.
20. ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯ ಬಹು ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ?
21. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?
22. ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?
23. ಕವಿ ಸಿ.ಪಿ.ಕೆ ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?.
24. ಪುಲಿಗೆರೆ ಸೋಮನಾಥನು ಸಾಮರ್ಥ್ಯಗಳನ್ನು ಕುರಿತಾಗಿ ಹೇಳಿರುವ ಮಾತುಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2x3=6**

25 "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ"

26. "ಇದೇ ಅಂತರಂಗ ಶುದ್ಧಿ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4x3=12**

27. ರಾಮ್‌ಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ತಿಳಿಸಿರಿ.
28. ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತರಾಗಲು ಕಾರಣವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
29. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಮಾನವೀಯ ಮೌಲ್ಯಗಳು ಯಾವುವು? ವಿವರಿಸಿರಿ.
30. ಮಳೆದೇವರಲ್ಲಿ ರೈತನು ಮಾಡಿಕೊಳ್ಳುವ ಪ್ರಾರ್ಥನೆಯನ್ನು ನೀವು ಏಕೆ ಮೆಚ್ಚುಕೊಳ್ಳುತ್ತೀರಿ? ವಿವರಿಸಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 2x3=6**

31. ಬೀಚಿ
32. ಸಿ.ಪಿ. ಕೃಷ್ಣಕುಮಾರ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ: 1x3=3**

33. "ಕೈ ಕೆಸರಾದರೆ ಬಾಯಿ ಮೊಸರು"

ಅಥವಾ

"ಹಾಸಿಗೆ ಇದ್ದಷ್ಟು ಕಾಲು ಚಾಚು"

**IX. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1x4=4**

34. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

**ಅಥವಾ**

'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1x4=4**

35. ಜಾತಿ ಇಲ್ಲದ ----------------------------
-----------------------------------------
-----------------------------------------
---------------------------ನಾವು ನಾಡ ಕಟ್ಟತೇವ

**ಅಥವಾ**

ಕ್ರಾಂತಿ ಕೆಂಡದ-------------------------------
-----------------------------------------
-----------------------------------------
--------------------------------- ಬರೆಯತೇವ

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **4x1=4**

ಮಕ್ಕಳೆಂದರೆ ವಿಶ್ವೇಶ್ವರಯ್ಯನವರಿಗೆ ಅಕ್ಕರೆ. ಒಮ್ಮೆ ಅವರು ತಮ್ಮ ಹುಟ್ಟೂರಾದ ಮುದ್ದೇನಹಳ್ಳಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಮಕ್ಕಳೆಲ್ಲ ಅವರನ್ನು ಮುತ್ತಿಕೊಂಡರು. ಆಗ ವಿಶ್ವೇಶ್ವರಯ್ಯನವರು ಉಪಾಧ್ಯಾಯರನ್ನು ಕರೆದು ಅವರಿಗೆ ಹಣಕೊಟ್ಟು ಮಕ್ಕಳಿಗೆಲ್ಲ ಸಿಹಿ ತಿಂಡಿ ತಂದುಕೊಡಲು ಹೇಳಿದರು. ಮಕ್ಕಳಿಗೆ ಎರಡು ಹಿತ ನುಡಿಗಳನ್ನು ಹೇಳಬೇಕೆಂದು ಕೇಳಿದಾಗ ಐದು ನಿಮಿಷ ಮಾತನಾಡಿದರು. ಆದರೆ ಅವರಿಗೆ ತೃಪ್ತಿ ಆಗಲಿಲ್ಲ. ಪೂರ್ವ ಸಿದ್ಧತೆ ಮಾಡಿಕೊಂಡು ಇನ್ನೊಮ್ಮೆ ಶಾಲೆಗೆ ಬಂದು ತಾವು ಬರೆದು ತಂದಿದ್ದ ಭಾಷಣವನ್ನು ಓದಿ ಸಮಾಧಾನ ಪಟ್ಟುಕೊಂಡರು. ವಿಶ್ವೇಶ್ವರಯ್ಯನವರು ಸಾರ್ಥಕ ಜೀವನ ನಡೆಸಿ, ನೂರಾಒಂದು ವರ್ಷಗಳ ಕಾಲ ಬದುಕಿದ್ದರು. ಶಿಸ್ತು, ಸಂಯಮಗಳನ್ನು ರೂಢಿಸಿಕೊಂಡು, ವ್ಯಕ್ತಿ ಸದಾ ಕಾರ್ಯನಿರತರಾಗುವುದರಲ್ಲಿ ಸುಖವಿದೆ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದ ಸರ್.ಎಂ.ವಿಶ್ವೇಶ್ವರಯ್ಯನವರು ಸ್ಫೂರ್ತಿಯ ಆದರ್ಶಜೀವಿಯಾಗಿ ಇವತ್ತಿಗೂ ಅಜರಾಮರರಾಗಿದ್ದಾರೆ.

36. ಪ್ರಶ್ನೆಗಳು :

1. ವಿಶ್ವೇಶ್ವರಯ್ಯನವರು ಎಲ್ಲಿಗೆ ಭೇಟಿ ನೀಡಿದರು?
2. ವಿಶ್ವೇಶ್ವರಯ್ಯನವರು ಹಣವನ್ನು ಉಪಾಧ್ಯಾಯರಿಗೆ ಏಕೆ ನೀಡಿದರು?
3. ವಿಶ್ವೇಶ್ವರಯ್ಯನವರು ಯಾವಾಗ ಸಮಾಧಾನ ಪಟ್ಟುಕೊಂಡರು?
4. ಸ್ಫೂರ್ತಿಯ ಆದರ್ಶಜೀವಿಯಾಗಿ ವಿಶ್ವೇಶ್ವರಯ್ಯನವರು ಹೇಗೆ ಬದುಕಿದರು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **4x1=4**

37. ಸಂಪರ್ಕ ಮಾಧ್ಯಮಗಳ ಉಪಯೋಗ–ದುಷ್ಪರಿಣಾಮಗಳು

**ಅಥವಾ**

ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

**XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:** **5x1=5**

38. ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಮರ್ಥ್ ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರೋಹಿತ್ ಎಂದು ಭಾವಿಸಿಕೊಂಡು, ಪೋಷಕರ ಸಭೆಗೆ ಆಹ್ವಾನಿಸುತ್ತ ಚಾಮರಾಜನಗರದಲ್ಲಿರುವ ನಿಮ್ಮ ತಾಯಿ ಸುಜಾತರಿಗೆ ಒಂದು ಪತ್ರವನ್ನು ಬರೆಯಿರಿ.

⦿⦿⦿⦿⦿